1522

15. ಎಗ್ಜಿಕ್ಯೂಟಿವ್ ಇಂಜನಿಯರವರ 1904ನೆ ಜೂನ್ 4ನೆ ನುಮ್ಮಂ ನಂಬರು 460ನೆ ಡಾಕೆಟ್ ನಿಶಿ ಬಂದ ಕಾವೇರಿ ಬರಗಳ ಪಟ್ಟಿಯನ್ನು ಓದಿ ಸದರಿ ಪಟ್ಟಿಯು ಮಂಜೂರ್ ಮಾಡತಕ್ಕದ್ದೆಂದು ತೀರ್ಮಾನಿಸಲಾಯಿತು.

16. ಬೋರ್ಡಿನವರ ಪರವಾಗಿ ಮೆ||.ಟಿ. ಭೀಮರಾಯರು ಮತ್ತು ಮೆ|| ಲಾಡಿ ಅಬ್ದುಲ್‌ಕರೀಂ ಸಾಹೇಬರು ಸಹ ಬರುವ ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಚುನಾಯಿಸಲ್ಪಡತಕ್ಕದ್ದೆಂತ ತೀರ್ಮಾನಿಸಲಾಯಿತು.

17. ಈ ಕೆಳಗೆ ಕಂಡ ಗವರ್ನಮೆಂಟ್ ಪ್ರೊಸೀಡಿಂಗ್ಸುಗಳನ್ನು ಓದಿ ರಿಕಾರ್ಡು ಮಾಡಲಾಯಿತು :—

(1) 1903-04ನೆ ಸಾಲಿನ ಶಿವಮೊಗ್ಗ ಡಿಸ್ಟ್ರಿಕ್ಟಿನ-ರಿವೈಜಾಪ ಬಜೆಟ್ಟನ್ನು ಮಂಜೂರು ಮಾಡಿರುವದಾಗಿ ಬಂದ 1904ನೆ ಜೂನ್ 4ನೆ ಮುಕ್ಕಂ ನಂಬರು 4725-30—ಎಲ್. ಎಫ್. 8-03ನೆ ಗವರ್ನಮೆಂಟ್ ಆರ್ಡರ್.

(2) 1904—05ನೆ ಸಾಲಿನ ಶಿವಮೊಗ್ಗ ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಫಂಡ್ ಬಜೆಟ್ಟನ್ನು ಮಂಜೂರ್ ಮಾಡಿರುವದಾಗಿ ಬಂದ 1904ನೆ ಜೂನ್ 21ನೆ ಮುಕ್ಕಂ ನಂಬರು 4981-7—ಎಲ್. ಎಫ್. 7-1904ನೆ ಗವರ್ನಮೆಂಟ್ ಆರ್ಡರ್.

(3) ಕೆಲವು ರಸ್ತೆಗಳಿಗೆ ಒಟ್ಟು 1,265 ರೂಪಾಯಿ ಜಾಸ್ತಿ ಮೈಲೇಜ್ ಅಲಾಟ್‌ಮೆಂಟ್‌ಗಳನ್ನು ಮಂಜೂರ್‌ಮಾಡಿರುವದಾಗಿ ಬಂದ 1904ನೆ ಜೂನ್ 28ನೆ ಮುಕ್ಕಂ ನಂಬರು 5056-9—ಎಲ್. ಎಫ್. 7-1898ನೆ ಗವರ್ನಮೆಂಟ್ ಆರ್ಡರ್.

(4) ಹೊಸದಾಗಿ ಏರ್ಪಾಡಾಗತಕ್ಕ ಗ್ರಾಮಗಳ ಯೂನಿರ್ಯಗಳಿಗೆ ಉದ್ಯೋಗದಲ್ಲಿಲ್ಲದವರನ್ನು ಈಗ ಮೊದಲನೇ ಸಾರಿಯೇ ಸಭಾಧ್ಯಕ್ಷರನ್ನಾಗಿ ನೇಮಿಸಬೇಕೆಂಬ ಸಲಹೆಗಳನ್ನು ಮಂಜೂರ್ ಮಾಡಲು ಆಗುವದಿಲ್ಲವೆಂತ ಬಂದ 1904ನೆ ಜೂನ್ 8ನೆ ಮುಕ್ಕಂ ನಂಬರ್ 4819-26—ಎಲ್. ಎಫ್. 125-03ನೆ ಗವರ್ನಮೆಂಟ್ ಆರ್ಡರ್.

(5) ಗ್ರಾಮ ಯೂನಿರ್ಯಗಳಲ್ಲಿ ಖಾಲಿ ಮನೆ ದಳಿಗಳ ಮತ್ತು ಹಿತ್ತಲುಗಳ ಮೇಲಿನ ಕಂದಾಯ ವಸೂಲಾತಿಯನ್ನು ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಒಪ್ಪಿಸಬೇಕೆಂಬ ವಿಷಯವು ಫೈಸಲಾಗುವ ವರೆಗೆ ಸದರಿ ಬಾಬುಗಳ ಮೇಲಿನ ಕಂದಾಯವು ರೆವಿನ್ಯು ಇಲಾಖೆಯವರಿಂದ ವಸೂಲ್ ಮಾಡಲ್ಪಡತಕ್ಕದ್ದೆಂತ ಬಂದ 1904ನೆ ಜೂನ್ 20ನೆ ಮುಕ್ಕಂ ನಂಬರು 4963-5—ಎಲ್. ಎಫ್. 66-03ನೆ ಗವರ್ನಮೆಂಟ್ ಆರ್ಡರ್.

(6) ವರ್ಕ್ ಇನ್‌ಸ್ಪೆಕ್ಟರುಗಳನ್ನು ಕಾಯಂ ಆಗಿ ಇಟ್ಟುಕೊಳ್ಳಬೇಕೆಂಬ ಸಲಹೆಗಳನ್ನು ಮಂಜೂರು ಮಾಡಿರುವದಾಗಿಯೂ, ಹಾಗೂ, ಈಗ ಕೆಲಸದಲ್ಲಿರತಕ್ಕವರಿಗೂ ಮತ್ತು ಇನ್ನು ಮುಂದೆ ಕೆಲಸಕ್ಕೆ ಬರತಕ್ಕವರಿಗೂ ಕೂಡ ಕೆಲವು ಯೋಗ್ಯತಾ ನಿಬಂಧನೆಗಳನ್ನು ಗೊತ್ತು ಮಾಡಿರುವದಾಗಿಯೂ ಸಹ ಬಂದ 1904ನೆ ಜೂನ್ 4ನೆ ಮುಕ್ಕಂ ನಂಬರು 4711-19—ಎಲ್. ಎಫ್. 320-96ನೆ ಗವರ್ನಮೆಂಟ್ ಆರ್ಡರ್.

18. ಬರುವ ಮೀಟಿಂಗು 1904ನೆ ನವಂಬರ್ ತಾರೀಖು 3ನೆ ಗುರುವಾರ ನಡೆಯತಕ್ಕದ್ದೆಂದು ನಿಷ್ಕರ್ಷೆ ಮಾಡಲಾಯಿತು.

ಎಂ. ಎಸ್. ನಾರಾಯಣರಾವ್,
ಪ್ರೆಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟು ಜಡ್ಜ್‌ರವರ ಕೋರ್ಟಿನಲ್ಲಿ.

ಸ್ರ 1904—05ನೆ ಇಸವಿ ಮಿ|| ಅರ್ಜೀ ನಂ. 107.

ಅರ್ಜೀದಾರ್ರು ತಿರುಮಕೂಡ್ಲು ನರಸೀಪುರದ ತಾಲ್ಲೂಕು ಬನ್ನೂರು ಹೋಬಳಿ ಕೇತೂಪುರದಲ್ಲಿರುವ ವೆಂಕಟರಮಣ ಶೆಟ್ಟರ ಮಗ ಚಿಲ್ಲರೆ ಅಂಗಡಿ ನಾರಾಯಣ ಶೆಟ್ಟಿ, ಮೈನರಾದ ಕೇತೂರುಪುರದ ಸ್ಥಳದ ಶೇಷಶೆಟ್ಟಿ ಮಗ ಭಂಗಾರಶೆಟ್ಟರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಭಂಗಾರಶೆಟ್ಟರಿಗೆ ದೊಡ್ಡಪ್ಪನು ಆಗಬೇಕೆಂಬ ಹಕ್ಕಿನ ಮೇಲೆ ಕೇತೂಪುರದ ನಾರಾಯಣಶೆಟ್ಟರು ಸದರೀ ಮೈನರಿನ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸ್ರ 1904ನೆ ಇಸವಿ ಡಿಸೆಂಬರ್ ತಾರೀಖು 2ರಲ್ಲು ವೊಕರರು ಮಾಡಿರುವದಾಗಿ ಇದರಿಂದ ನೋಟಿಸು ಕೊಡಲಾಗಿದೆ.

ಸ್ರ 1904ನೆ ಇಸವಿ ಅಕ್ಟೋಬರ್ ತಿಂಗಳು 14ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ ಈ 1904—1905ನೆ ಇಸವಿ ಅರ್ಜೀ ನಂಬರ್ 117.

ಮೃತಪಟ್ಟ ರಾಮುಬಕಷ್ ಯವರ ಆಸ್ತೀ ವಿಷಯದಲ್ಲಿ--

ಅರ್ಜೀದಾರರು ಮೈಸೂರು ಮಂಡಿ ಮೊಹಲ್ಲಾದಲ್ಲಿರುವವರು ಟೀಕಾ ರಾಮಪ್ಪನವರ ಮಕ್ಕಳು 1ನೆ ರಾಮು, 2ನೆ ರಾಮು ವೆರುಫಾ ಲಚ್ಚು, 3ನೆ ಬಾಲಾರಾಂ ಮೈನರ್, ಗಾರ್ಡಿಯರ್ 1ನೆ ಅರ್ಜೀದಾರ್, ಮೃತಪಟ್ಟ ಸದರೀ ರಾಮುಬಕಷ್ಯವರಿಗೆ ಮೊಮ್ಮಕ್ಕಳು ಆಗಬೇಕೆಂಬ ಹಕ್ಕುದಾರರು ನೋಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ರಾಮುಬಕಷ್ಯವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ ಮಾಡುವದಕ್ಕೆ ಸ್ ಈ 1901ನೆ ಇಸವಿ 7ನೆ ರೆಗ್ಯುಲೇರ್ಷ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸ್ ಈ 1904ನೆ ಇಸವಿ ನವಂಬರ್ ತಿಂಗಳು ತಾರೀಖು 22 ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮುಬಕಷ್ ಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ಈ 1904ನೆ ಇಸವಿ ಅಕ್ಟೋಬರ್ ತಿಂಗಳು 6ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ಈ 1904—1905ನೆ ಇಸವಿ ಅರ್ಜೀ ನಂಬರ್ 137.

ಮೃತಪಟ್ಟ ಮಿರ್‌ನಿಜತ್ತ್ ಅಲ್ಲಿಖಾರ್ ರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಮೈಸೂರು ಚಾಮರಾಜಪೇಟೆಯಲ್ಲಿ ಎಕ್ಸೈಜ್ ಅಸಿಸ್ಟೆಂಟ್ ಕಮಿಷನರ್ T. N. ಮಿರ್‌ನಿಜಾಮುದ್ದೀನ್ ಅಲಿ ಖಾನ್, ಮೃತಪಟ್ಟ ಸದರೀ ಮಿರ್‌ನಿಜತ್ತ್ ಅಲ್ಲಿಖಾರ್‌ರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ನೋಲೆ ಮೈಸೂರು ವಾಸಸ್ಥರಾಗಿ ಕಡೂರಲ್ಲಿ ಮೃತಪಟ್ಟ ಮಿರ್‌ನಿಜತ್ತ್ ಅಲ್ಲಿಖಾರ್ ರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ ಮಾಡುವದಕ್ಕೆ ಸ್ ಈ 1901ನೆ ಇಸವಿ 7ನೆ ರೆಗ್ಯುಲೇರ್ಷ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸ್ ಈ 1904ನೆ ಇಸವಿ ನವಂಬರು ತಿಂಗಳು ತಾರೀಖು 22ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಿರ್‌ನಿಜತ್ತ್ ಅಲ್ಲಿಖಾರ್ ರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ಈ 1904ನೆ ಇಸವಿ ಅಕ್ಟೋಬರ್ 6ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ಈ 1904—1905ನೆ ಇಸವಿ ಅರ್ಜೀ ನಂಬರ್ 142.

ಮೃತಪಟ್ಟ ಕುತ್ತಾಗಾಲಂ ರಂಗಾಚಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಮೈಸೂರು ಸುಬ್ಬಾಯನಕೆರೆ ಬಳಿ ವಾಸವಾಗಿರುವ ಕುತ್ತಾಗಾಲಂ ರಂಗಾಚಾರ್ರ ಹೆಂಡತಿ ತಿಂಗಮ್ಮ, ಮೃತಪಟ್ಟ ಸದರೀ ರಂಗಾಚಾರ್ರಿಗೆ ಪುಂಡತಿ ಆಗಬೇಕೆಂಬ ಹಕ್ಕುದಾರಿ ನೋಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ರಂಗಾಚಾರ್ರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ ಈ 1901ನೆ ಇಸವಿ 7ನೆ ರೆಗ್ಯುಲೇರ್ಷ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸ್ ಈ 1904ನೆ ಇಸವಿ ನವಂಬರ್ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗಾಚಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ಈ 1904ನೆ ಇಸವಿ ಅಕ್ಟೋಬರ್ 11ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ಈ 1904—1905ನೆ ಇಸವಿ ಅರ್ಜೀ ನಂಬರ್ 156.

ಸಂಜನಗೂಡು ತಾಲ್ಲೂಕು ಕಳಲೆ ಸ್ಕೂಲ್ ಮಾಸ್ಟರಾಗಿದ್ದು ಮೈಸೂರು ವೀರನಗೆರೆ ಕ್ಯಾಂಪಿನಲ್ಲಿ ಮೃತಪಟ್ಟ ಶ್ರೀನಿವಾಸ್ಯೆಯ್ಯ ಎಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ಚಾಮುಂಡಿ ಪಟ್ಟಣದಲ್ಲಿರುವ ಸ್ಕೂಲ್ ಮ್ಯಾಸ್ಟರ್ M. C. ಸುಬ್ಬಾಯರು, ಮೃತಪಟ್ಟ ಸದರೀ ಶ್ರೀನಿವಾಸ್ಯೆಯ್ಯನವರಿಗೆ ಅಣ್ಣನ ಮಗ ಆಗಬೇಕೆಂಬ ಹಕ್ಕುದಾರಿಮೇಲೆ ಮೇಲ್ಕಂಡಂತೆ ವಾಸಸ್ಥರಾಗಿ ಮೃತಪಟ್ಟ ಶ್ರೀನಿವಾಸ್ಯೆಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ ಈ 1901ನೆ ಇಸವಿ 7ನೆ ರೆಗ್ಯುಲೇರ್ಷ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ M. C. ಸುಬ್ಬಾಯರ ಅರ್ಜಿಯನ್ನು ಸ್ ಈ 1904ನೆ ಇಸವಿ ನವಂಬರ್ ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀನಿವಾಸ್ಯೆಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ಈ 1904ನೆ ಇಸವಿ ಅಕ್ಟೋಬರ್ ತಿಂಗಳು 14ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಪರಮೇಶ್ವರ ಅಯ್ಯರ್,
ಸಬ್ ಜಡ್ಜ.

1549

ಇಸ್ತಿಹಾರ್.

ತಾರೀಖು 28ನೆ ಸೆಪ್ಟಂಬರ್ 1904ನೆ ಇಸವಿ.

ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಫವತಿ ಆದ ಬೈದಿ ವಡ್ಡರ ಬುಲಿಗನ ಬಾಬತು ಈ ಕೋರ್ಟಿನಲ್ಲಿ ಅಮಾನತ್ತು ಇರುವ ಸ್ವತ್ತುಗಳಿಗೆ ಬಾಧ್ಯತೆವುಳ್ಳವರು 6 ತಿಂಗಳೆ ವಳಗಾಗಿ ಈ ಕೋರ್ಟ ರೂಬರೂ ಹಾಜರಾಗಿ ವಾರಸು ಸಂಗತಿಯನ್ನು ದೃಢಪಡಿಸಿ ಕೊಳ್ಳಬೇಕು. ಸ್ವತ್ತುಗಳ ವಿವರ ಮತ್ತು ಇತರೆ ತಪ್ಪಲು ವಿಷಯದಲ್ಲಿ ಮೈಸೂರು ಗೆಜೆಟ್ 2ನೆ ಭಾಗದ 580ನೆ ಪುಟದಲ್ಲಿ ಫಾ ಯಿಷಾಗಿರುವ ಇಸ್ತಿಹಾರ್ ನೋಡಬೇಕು.

ಸಿ. ಕೇಷಾದ್ರಿಯ್ಯಂಗಾರ್,
ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್.

ಎಡೆಹಳ್ಳಿ ಸಬ್ ಡಿವೀಜ್ಯ ಮುನ್ಸೀಫರವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಎಡೆಹಳ್ಳಿ ಸಬ್ ತಾಲ್ಲೂಕ್ ಕುದುರುಗುಂಡಿ ಪೊಲೀಸ್ ಜವಾನ
ಕಾರಬೈಲ್ ಲಿಂಗೋಜಿ ವಿಷಯದಲ್ಲಿ—

ಸ್ಯ 1903–04ನೆ ಇಸವಿ ದಿವಾಳಿ ಕೇಸ್ ನಂ. 270.

ಹುಕುಂ.

ಮೇಲ್ಕಂಡ ಕಾರಬೈಲ್ ಲಿಂಗೋಜಿಯು ನಿರ್ಬಂಧದಿಂದ ಖುಲಾಸೆ ಯಾಗಬೇಕೆಂದು ಕೊಟ್ಟ ಅರ್ಜಿ ಅಂಕನ್ನು ಮುನ್ಸೀಫ್ ಎ. ನರಸಿಂಹ ಅಯ್ಯಂಗಾರ್, ಎಸ್ಕ್ವಯರ್ ಯವರ ರೂಬರೂ ಅರ್ಜಿದಾರರಾದ ಕಾರಬೈಲು ಲಿಂಗೋಜಿಯು ಸದರಿ ಯವರ ಲೇ ಣೆದಾರರಾದ 1ನೆ ಕೂತಗೋಡು ಕೃಷ್ಣಭಟ್ಟರು, 2ನೆ ಕೂತುಗೋಡು ಲಕ್ಷ್ಮೀನಾರಾಯಣಭಟ್ಟರು ಇವರುಗಳ ತರಫ: ಪ್ಲೀಡರ್ ವೆ|| ಕೇಷಾಚಲೈಯ್ಯನವರು ಇವರಿಗೂ ದರ್ಖಾಸ್ತು ಮಾಡಲ್ಪಟ್ಟಿತು. ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಖಾಸ್ತು ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರಂದರೆ—3ನೆ ಜವ್ಮಟಿಗೆ ವಿಶ್ವೇಶ್ವರಭಟ್ಟ, 4ನೆ ವಗಳೆ ವೆಂಕಟಾಚಲೈಯ್ಯ ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೆ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರಿ ಕಾರಬೈಲ್ ಲಿಂಗೋಜಿಯವರು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗ ಸದರಿ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿ ರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ವರವಾಗಿ ಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂ ಧಪಡುವ ಜವಾಬ್ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1904ನೆ ಇಸವಿ ಸೆಪ್ಟಂಬರ್ ತಿಂಗಳು 21ನೆ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತ್ತೊಡನೆ ಕೊಡಲ್ಪ ಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೆದಾರರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೆ ಉಂಟಾದದ್ದು.	ದೇಣೆ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರು ಇದ್ದರೆ.	ಟಿಪ್ಪಣಿ.
		ರೂ. ಆ. ಪೈ.			
1	ಕೂತುಗೋಡು ಕೃಷ್ಣಭಟ್ಟ ..	98 0 0	...	ಡಿಕ್ರಿ ಬಾಬತು.	
2	ಕೂತುಗೋಡು ಲಕ್ಷ್ಮೀನಾರಣಭಟ್ಟ ...	ಜಿಲ್ಲರೆ			
3	ಜವ್ಮಟಿಗೆ ವಿಶ್ವೇಶ್ವರ ಭಟ್ಟ ..	400 0 0	...	ಲೆಖ್ಕದ ಬಾಕಿ.	
		ಜಿಲ್ಲರೆ			
4	ವಗಳೆ ವೆಂಕಟಾಚಲೈಯ್ಯ ...	15 0 0	..	ಪ್ರೊನೋಟು.	
	ಜುಮ್ಲಾ ...	513 0 0			

ಎ. ನರಸಿಂಹ ಐಯ್ಯಂಗಾರ್,
ಮುನ್ಸೀಫ್.

Mysore Govt. Central Press, Bangalore.—1904.